ಸಾಕ್ಷಿ ಯನ್ನು ದಿಃ 13.12.2024 ರಂದು  ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ  ಆರೋಪಿ ಪರ ವಕೀಲರಿಂದ**

1. ನಿಪಿ - 1(ಎ)ರ ಸಹಿ ಆರೋಪಿ ಮಾಡಿ ಎಷ್ಟು ದಿನಗಳಾಗಿವೆ ಎಂದರೆ, 4 ವರ್ಷಗಳಾಗಿವೆ, ದಿಃ 15.05.2021 ರಂದು ಸದರಿ ಸಹಿ ಮಾಡಿದ್ದಾರೆ.
2. ಆ ರೀತಿ ಎಷ್ಟು ಸಹಿ ಚೆಕ್ ಮೇಲೆ ಮಾಡಿದ್ದಾರೆ ಎಂದು ನನಗೆ ಈಗ ನೆನಪಿಲ್ಲ.
3. ಆರೋಪಿ ಸಹಿಯನ್ನು ನನ್ನ ಎದುರುಗಡೆ ಮಾಡಿರುತ್ತಾರೆ. ಆ ಸಮಯದಲ್ಲಿ ನಾನು ಮತ್ತು ಆರೋಪಿ ಮಾತ್ರ ಇದ್ದೆವು.
4. ನಿಪಿ - 1 ರ ಮೇಲಿರುವ ಬರವಣಿಗೆಯನ್ನು ಆರೋಪಿಯು ನನ್ನ ಎದುರುಗಡೆ ಖುದ್ದಾಗಿ ನಮ್ಮ ಮನೆಯಲ್ಲಿ ಬರೆದಿರುತ್ತಾರೆ.
5. ಆರೋಪಿ ನನ್ನ ಬಳಿ ದಿಃ 15.04.2021 ರಂದು ಫೋನ್ ಮೂಲಕ ಹಣ ಕೇಳಿದ್ದರು. ನಾನು ಮನೆಗೆ ಬನ್ನಿ ಕೊಡುತ್ತೇನೆ ಎಂದು ಹೇಳಿದ್ದೆ. ಆರೋಪಿ ಒಂದು ತಿಂಗಳಲ್ಲಿ ಹಣ ವಾಪಸ್ ಕೊಡುವುದಾಗಿ ತಿಳಿಸಿದ್ದರು. ಯಾವುದೇ ಬಡ್ಡಿಯ ಬಗ್ಗೆ ಮಾತುಕತೆಯಾಗಿರಲಿಲ್ಲ.
6. ನಾನು ಆದಾಯ ತೆರಿಗೆ ಪಾವತಿ ಮಾಡುವುದಿಲ್ಲ. ನಾನು ವ್ಯವಸಾಯ ಮಾಡುತ್ತೇನೆ.
7. ವ್ಯವಸಾಯ ಹೊರತುಪಡಿಸಿ, ನನಗೆ ಪಿರಿಯಾಪಟ್ಟಣದ ಸಂತೆಪೇಟೆಯಲ್ಲಿ ಬಟ್ಟೆ ಅಂಗಡಿ ಇದೆ.
8. ನಮ್ಮ ಕುಟುಂಬದ 15 ಎಕರೆ ಜಮೀನಿದ್ದು, ವ್ಯವಸಾಯದಿಂದ ಸುಮಾರು ವರ್ಷಕ್ಕೆ 5-8 ಲಕ್ಷ ಆದಾಯ ಬರುತ್ತದೆ. ಬಟ್ಟೆ ಅಂಗಡಿಯಿಂದ ವರ್ಷಕ್ಕೆ ಸುಮಾರು 5 ಲಕ್ಷ ಆದಾಯ ಬರುತ್ತದೆ. ವ್ಯವಸಾಯವನ್ನು ನಾನೇ ಮಾಡಿಸುತ್ತೇನೆ. ಬಟ್ಟೆ ಅಂಗಡಿಯನ್ನು ನಾನೇ ನೋಡಿಕೊಳ್ಳುತ್ತೇನೆ.
9. ನಾವು 3 ಜನ ಸಹೋದರರು ಇದ್ದೇವೆ. ನಮ್ಮ ನಡುವೆ ವಿಭಾಗವಾಗಿರುವುದಿಲ್ಲ.
10. ಆರೋಪಿ ಗೃಹಕೃತ್ಯದ ಖರ್ಚಿಗಾಗಿ ಹಾಗೂ ಕೈಸಾಲ ತೀರಿಸಲು ನನ್ನ ಬಳಿ ಹಣ ಪಡೆದಿದ್ದರು.
11. ಆರೋಪಿಯು ಚೆಕ್ಕನ್ನು ಸಾಲ ಪಡೆದ ದಿನವೇ ನೀಡಿರುತ್ತಾರೆ.
12. ಆರೋಪಿ ಚೆಕ್ ನೀಡಿದ ಸಮಯದಲ್ಲಿ ಅವರ ಖಾತೆಯ ಹಣ ಇದೆ ಪಡೆದುಕೊಳ್ಳಿ ಎಂದು ಹೇಳಿದ್ದರಾ ಎಂದರೆ, ಒಂದು ತಿಂಗಳ ನಂತರ ಡ್ರಾ ಮಾಡಿಕೊಳ್ಳುವಂತೆ ಹೇಳಿದ್ದರು.

13. ಒಂದು ತಿಂಗಳ ನಂತರ ಬ್ಯಾಂಕಿಗೆ ಚೆಕ್ಕನ್ನು ಹಾಜರುಪಡಿಸುವ ಮುಂಚೆ ಆರೋಪಿಗೆ ನೊಟೀಸು ನೀಡಿದ್ದಿರಾ ಎಂದರೆ, ಫೋನ್ ಮೂಲಕ ತಿಳಿಸಿದ್ದೆ ಎಂದು ನುಡಿಯುತ್ತಾರೆ. ಆ ರೀತಿ ದಿಃ 15.05.2021 ರಂದು ಬೆಳಿಗ್ಗೆ ತಿಳಿಸಿದ್ದೆ. ಆಗ ಅವರು ಬ್ಯಾಂಕ್ ನಲ್ಲಿ ಹಣ ಇದೆ ಡ್ರಾ ಮಾಡಿಕೊಳ್ಳಿ ಎಂದು ತಿಳಿಸಿದ್ದರು. ನಾನು ಅದೇ ದಿನ ಬ್ಯಾಂಕಿಗೆ ಚೆಕ್ ಹಾಜರುಪಡಿಸಿದ್ದೆ.
14. ಬಟ್ಟೆ ಅಂಗಡಿ ಜೊತೆಗೆ ನೀವು ಚೀಟಿ ವ್ಯವಹಾರ ನಡೆಸುತ್ತೀರಾ ಎಂದರೆ, ಸರಿಯಲ್ಲ. ಚೀಟಿ ವ್ಯವಹಾರ ನಡೆಸುವಾಗ ಆರೋಪಿ ನಿಮ್ಮ ಬಳಿ 1 ಲಕ್ಷದ ಚೀಟಿ ಹಾಕಿದ್ದರು ಎಂದರೆ ಸರಿಯಲ್ಲ.
15. ಚೀಟಿ ಕೂಗಿದಾಗ ಆರೋಪಿಯಿಂದ ಖಾಲಿ ಚೆಕ್ ಪಡೆದು, ಆತನಿಗೆ ಚೀಟಿ ಹಣ ನೀಡಿದ್ದೀರಾ ಎಂದರೆ ಸರಿಯಲ್ಲ.
16. ಆರೋಪಿ ಸದರಿ ಚೀಟಿ ಹಣವನ್ನು ವಾಪಸ್ ನೀಡಿದ್ದರೂ ಸಹ, ಅವರು ನೀಡಿದ ಖಾಲಿ ಚೆಕ್ಕನ್ನು ದುರುಪಯೋಗಪಡಿಸಿಕೊಂಡು, ಸುಳ್ಳು ಪ್ರಕರಣ ದಾಖಲು ಮಾಡಿದ್ದೀರಾ ಎಂದರೆ ಸರಿಯಲ್ಲ.
17. ನಿಮ್ಮ ಹೆಸರಿನಲ್ಲಿ ಯಾವುದೇ ಜಮೀನು ಇಲ್ಲ, ಒಟ್ಟು ಕುಟುಂಬದಲ್ಲೂ ಸಹ ಇಲ್ಲ ಹಾಗೂ ವ್ಯವಸಾಯದಿಂದ ಯಾವುದೇ ಆದಾಯ ಇಲ್ಲ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗ ಸಮಯ ಕೋರಿದ್ದು, ಸಮಯ ನೀಡಿ ಮೂಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ
ಪಿರಿಯಾಪಟ್ಟಣ